
# ಚೆಕ್ ಮೀಟ್

ಜೀವನವೇ ಒಂದು ಚದುರಂಗ
ಎಂದು ಭಾವಿಸಿದಾಗಲೆಲ್ಲ
ಕಣ್ಣೆದುರಿಗೆ ಬರೀ
ಕಪ್ಪು ಬಿಳುಪಿನ ಚೌಕದ ಸಾಲು ಸಾಲು
ಹಾಸಿನ ಮೇಲೆ ಕಪ್ಪು ಸೈನ್ಯಕ್ಕೆ ಎದುರಾಗಿ
ಶತಮಾನಗಳಿಂದಲೂ ಎಲ್ಲವನ್ನೂ
ನಿಯಂತ್ರಿಸುತ್ತ ಕಾವಲು
ಕಾಯುತ್ತ ನಿಂತ ಬಿಳಿಯ ಸೈನ್ಯ

ಕಪ್ಪು ಆನೆ ಒಂಟೆ ಕುದುರೆಗಳನ್ನೆಲ್ಲ
ಧ್ವಂಸಗೈದ ಬಿಳಿಯ ಸೈನ್ಯವನ್ನು
ಬರೀ ಪದಾತಿದಳವೊಂದರಿಂದಲೇ
ಕಟ್ಟಿಹಾಕಿ ನಿಯಂತ್ರಿಸುವುದೂ
ಒಂದು ಕಲೆ
ಚಕ್ರವ್ಯೂಹಕ್ಕೂ ಒಂದು ತಿರುಮಂತ್ರವಿದೆ
ಎಂಬುದನ್ನು ಮರೆತಿರೋ
ಬದುಕು ಮೂರಾಬಟ್ಟೆ

ಮಿಸುಕಲೂ ಆಗದಂತಹ ಸಂದಿಗ್ಧ
ಪರಿಸ್ಥಿತಿಯಲ್ಲಿಯೂ
ಆನೆಯೊಂದಿಗೆ ಹೊಂದಾಣಿಕೆ
ಮಾಡಿಕೊಂಡು
ಬದುಕಲೆಂದೇ ಇದೆ ಕ್ಯಾಸ್ಲಿಂಗ್
ರಾಜನೊಬ್ಬ ಬದುಕಿದರೆ ಸಾಕು
ಆತನ ಸೈನ್ಯಕ್ಕೇಕೆ ಅಂತಹ ಲೆಕ್ಕ?

ಒಬ್ಬ ರಾಜನನ್ನುಳಿಸಲು
ಸೈನ್ಯದ ಪ್ರತಿಯೊಬ್ಬನೂ
ಜೀವದ ಹಂಗು ತೊರೆದು
ಹೋರಾಡಬೇಕು
ಪದಾತಿದಳದ ಸೈನಿಕನೊಬ್ಬ ಒಂದೊಂದೇ
ಹೆಜ್ಜೆಯಿಟ್ಟು ಕೊನೆಯ ಹಂತ ತಲುಪಿ
ತ್ರಿವಿಕ್ರಮನಾಗಿಬಿಟ್ಟರೆ ತಕ್ಷಣವೇ



ಆತನನ್ನು ಬದಲಿಸಿ ರಾಣಿಯೊಬ್ಬಳನ್ನು
ಪಟ್ಟಕ್ಕೇರಿಸಬೇಕು
ಇನ್ನೊಬ್ಬರ ಶ್ರಮದ ದುಡಿಮೆಯಲ್ಲಿ
ರಾಜ ಮತ್ತಷ್ಟು ಕೊಬ್ಬಬೇಕು

ಎಷ್ಟೆಂದು ಆಡುತ್ತೀರಿ?
ದಿನವಿಡೀ ಒಂದೇ ಆಟ
ಛೇ... ಈಗಲಾದರೂ ಮುಗಿಸಿ ಬಿಡಿ
ಕಪ್ಪು ಸೈನ್ಯವನ್ನು ಸೋಲಿಸುವ
ಮೋಸದಾಟ
ಮುಸುಗುಡುವ ಬಿಳಿಯ
ರಾಜನಿಗೆ ಎದುರಾಗಿ
ಕಪ್ಪು ರಾಣಿಯನ್ನಿಟ್ಟು ಬಿಟ್ಟರೆ
ಅಲ್ಲಾಡಲಾಗದೇ ಜೀವನವೇ ಚೆಕ್‌ಮೀಟ್

● ಶ್ರೀದೇವಿ ಕೆರೆಮನೆ

ಚಿತ್ರಗಳು: ವಾಗೀಶ ಹೆಗಡೆ